<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,
ಶ್ರೀರಂಗಪಟ್ಟಣ</u>

<u>ಸಿ.ಸಿ.**632**/2021</u>

| | |
|---|---|
| ಸಿ.ಡಬ್ಲ್ಯೂ ಃ | 5 |
| ಪಿ.ಡಬ್ಲ್ಯೂ ಃ | 6 |

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸಿದ್ದರಾಮ ನಾಯಕ |
| ತಂದೆ/ ಪತಿಯ ಹೆಸರು | ಃ | ಸಿದ್ದಯ್ಯ |
| ವಯಸ್ಸು | ಃ | 35 ವರ್ಷ |
| ವೃತ್ತಿ | ಃ | ಮುಖ್ಯ ಪೇದೆ , ಸೆಂಟ್ರಲ್ ಪೊಲೀಸ್ ಠಾಣೆ , ಮಂಡ್ಯ |
| ವಾಸ | ಃ | ಮಂಡ್ಯ |

**<u>ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 22.12.2025</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ</u>**

ನಾನು ಏಪ್ರಿಲ್ 2020 ನೇ ಇಸವಿಯಿಂದ 2023 ನೇ ಇಸವಿಯವರೆಗೆ ರಿಂದ ಅರಕೆರೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ30.03.2021 ರಂದು ರಾತ್ರಿ 8.50 ಗಂಟೆ ಸಮಯದಲ್ಲಿ ಚಾಸಾ.1 ರವರು ಚಾಸಾ.4 ರವರ ಜೊತೆ ಅರಕೆರೆ ಗ್ರಾಮದಲ್ಲಿ ಗಸ್ತಿನಲ್ಲಿ ಇದ್ದಾಗ ಅವರಿಗೆ ಮಂಡ್ಯಕೊಪ್ಪಲು ಗ್ರಾಮದ ಎಲ್ಲೆಯಲ್ಲಿರುವ ಸಣ್ಣಬೋರರವರ ಅಂಗಡಿಯ ಬಳಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿದ್ದು ಆಗ ಚಾಸಾ.1 ರವರು ಪೊಲೀಸ್ ಠಾಣೆಗೆ ಹೋಗುವಂತೆ ನನಗೆ ತಿಳಿಸಿದ್ದು, ನಾನು ಜೀಪ್ ಚಾಲಕನಾದ ಕಾರಣ ನಾವೆಲರೂ ಪೊಲೀಸ್ ಠಾಣೆಗೆ ಬಂದಿರುತ್ತೇವೆ.

ನಂತರ ಚಾಸಾ.1 ರವರು ಎಸ್.ಹೆಚ್.ಒ ರವರಿಗೆ ಇದರ ಸಂಬಂಧ ದೂರನ್ನು ನೀಡಿ ನಂತರ ನಮ್ಮ ಪೊಲೀಸ್ ಠಾಣೆ ಇದ್ದಂತ ಶ್ರೀಧರ ಮತ್ತು ಸುರೇಶ್ ರವರುಗಳನ್ನು ಚಾಸಾ.1 ರವರು ಪಂಚರರನ್ನಾಗಿ ನೇಮಿಸಿಕೊಂಡಿದ್ದು ನಂತರ ನಾವೆಲ್ಲರೂ ಇಲಾಖಾ ಜೀಪ್ ನಲ್ಲಿ ಮಂಡ್ಯಕೊಪ್ಪಲು ಗ್ರಾಮಕ್ಕೆ ಹೋಗಿರುತ್ತೇವೆ. ಅಲ್ಲಿ ಸಣ್ಣಬೋರರವರ ಅಂಗಡಿಯ ಬಳಿ ಸುತ್ತಾ ಮುತ್ತಾ ನೋಡಿದಾಗ ಒಂದು ಬಿಳಿ ಬಣ್ಣದ ಬಟ್ಟೆಯ ಬ್ಯಾಗ್ ಇದ್ದು ಅದನ್ನು ಪರಿಶೀಲಿಸಲಾಗಿ ಅದರಲ್ಲಿ ಮದ್ಯದ ಪೌಚ್ ಗಳು ಇರುವುದು ಕಂಡು ಬಂದಿರುತ್ತದೆ. ಸದರಿ ಬ್ಯಾಗ್ ನ ಬಗ್ಗೆ ಸಣ್ಣಬೋರರವರ ಬಳಿ ವಿಚಾರಿಸಿದಾಗ ಸದರಿ ಬ್ಯಾಗ್ ಅವರದ್ದೇ ಎಂದು ಆರೋಪಿ ತಿಳಿಸಿರುತ್ತಾರೆ. ಮಾರಾಟ ಮಾಡಲು ಲೈಸೆನ್ಸ್ ಇರುತ್ತದಯೇ ಎಂದು ಕೇಳಿಲಾಗಿ ಆರೋಪಿಯು ಯಾವುದೆ ಲೈಸೆನ್ಸ್ ಇಲ್ಲ ಎಂದು ಹೇಳಿರುತ್ತಾರೆ. ಆರೋಪಿಯಬಗ್ಗೆ ವಿಚಾರಿಸಲಾಗಿ ಸಣ್ಣಬೋರ ಬಿನ್ ಶಿವಣ್ಣ, ಅಂಗಡಿ ವ್ಯಾಪಾರ ಎಂದು ತಿಳಿಸಿರುತ್ತಾರೆ.

ಸದರಿ ಬ್ಯಾಗ್ ಅನ್ನು ಪರಿಶೀಲಿಸಲಾಗಿ ಅದರಲ್ಲಿ 180 ಎಂ.ಎಲ್ ನ old admiral brandia 10 ಪೌಚ್ ಗಳು , 180 M.L ನ bag piper whiskey ಯ 5 ಪೌಚ್ ಗಳು ಇದ್ದು ಅವುಗಳ ಒಟ್ಟು ಮೌಲ್ಯ ರೂ.1398/- ಆಗಿರುತ್ತದೆ. ಸದರಿ ಮದ್ಯದ ಒಟ್ಟು ಪ್ರಮಾಣ 2.70 ಲೀಟರ್ ಆಗಿರುತ್ತದೆ. ನಂತರ ಚಾಸಾ.1 ರವರು ಸದರಿ 15 ಟೆಟ್ರಾ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ಎಲ್ಲಾ ಪ್ಯಾಕೆಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ಬಾಯಿಯನ್ನು ಕಟ್ಟಿ A ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರರ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

ಪಂಚನಾಮೆಯನ್ನು ರಾತ್ರಿ 9.50 ರಿಂದ 10.50 ಗಂಟೆವರೆಗೆ ಜೀಪ್ ಹೆಡ್ ಲೈಟ್ ಹಾಗೂ ಟಾರ್ಚ್ ಲೈಟ್ ನ ಸಹಾಯದಿಂದ ಜರುಗಿಸಿ , ಆರೋಪಿ ಹಾಗೂ ಮದ್ಯದ ಪ್ಯಾಕೇಟ್ ಗಳನ್ನು ವಶಕ್ಕೆ ಪಡೆದು ನಂತರ ವಾಪಾಸ್ಸು ಠಾಣೆಗೆ ಬಂದಿರುತ್ತೇವೆ. ಸಾಕ್ಷಿಗೆ ಈಗ 15 ಟೆಟ್ರಾ ಪ್ಯಾಕೇಟ್ ಗಳನ್ನು ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ. 1 ರಿಂದ 3 ಎಂದು ಗುರುತಿಸಲಾಗಿರುತ್ತದೆ. ಈ ಘಟನೆ ಸಂಬಂಧ ನಾನು ಹೇಳಿಕೆಯನ್ನು ಸಹಾ ನೀಡಿರುತ್ತೇನೆ.

<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ</u>

ಠಾಣೆಯಿಂದ ನಾವು ಜೀಪಿನಲ್ಲಿ ನಾನು, ಚಾಸಾ.1 , 4 ಹಾಗೂ ಪಂಚರರಾದ ಶ್ರೀಧರ್ ಹಾಗೂ ಸುರೇಶ್ ರವರುಗಳು ಹೋಗಿರುತ್ತೇವೆ. ಆರೋಪಿ ಅಂಗಡಿ ಬಳಿ ನೀವೇ ಜೀಪನ್ನು ಚಾಲನೆ ಮಾಡಿಕೊಂಡು ಹೋಗಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು

ಎಂದು ನುಡಿಯುತ್ತಾರೆ. ಜೀಪಿನಲ್ಲಿ ಬಂದ ವ್ಯಕ್ತಿಗಳನ್ನು ಹೊರತುಪಡಿಸಿ ಸ್ಥಳಕ್ಕೆ ಬೇರೆ ಯಾರು ಬಂದಿರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾಗೇಂದ್ರ ಎಂಬ ಮುಖ್ಯ ಪೇದೆರವರು ಬೈಕಿನಲ್ಲಿ ಸ್ಥಳಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಪೊಲೀಸ್ ಠಾಣೆಯಿಂದ ಘಟನಾ ಸ್ಥಳಕ್ಕೆ ಸುಮಾರು 3 ರಿಂದ 4 ಕಿ.ಮಿ ಅಂತರ ಇರುತ್ತದೆ. ಘಟನಾ ಸ್ಥಳಕ್ಕೆ ಹೋದಾಗ ಸಮಯ ರಾತ್ರಿ 9.40 ಗಂಟೆ ಆಗಿತ್ತು .

ಮಹಜರ್ ಅನ್ನು ಪೊಲೀಸ್ ಠಾಣೆಯಲ್ಲಿ ಬರೆದಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸ್ಥಳದಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪಂಚರರು ಮಹಜರ್ ಗೆ ಯಾವ ಸ್ಥಳದಲ್ಲಿ ಸಹಿ ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಅದನ್ನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಅಂಗಡಿಯ ಮುಂದೆ ರಾಜ್ಯ ಹೆದ್ದಾರಿ ಇದೆ ಎಂದರೆ ಸರಿ. ಆರೋಪಿ ಟೀ, ಬೀಡಿ, ಸೀಗರೇಟ್ ಅಂಗಡಿ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ಆ ದಿನ ನಾವು ಆರೋಪಿಯ ಅಂಗಡಿ ಬಳಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಕ್ರಮ ಜರುಗಿಸುವ ಸಮಯದಲ್ಲಿ ಜೀಪಿನ ಹೆಡ್ ಲೈಟ್ ಆನ್ ಮಾಡಿ ಜೀಪ್ ನ ಪಕ್ಕದಲ್ಲೇ ಇದ್ದೆನು.

ನಾನು ಸ್ಥಳದಲ್ಲಿ ಇರದಿದ್ದರೂ ಸಹಾ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ರವರು ಆರೋಪಿ ಕಡೆಯಿಂದ ಯಾವುದೇ ಮದ್ಯದ ಪೌಚ್ ಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗಡಿಯ ಒಳಗಡೆ ಮದ್ಯದ ಬ್ಯಾಗ್ ಸಿಕ್ಕಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅಂಗಡಿಯ ಪಕ್ಕದಲ್ಲಿ ಸಿಕ್ಕಿರುತ್ತದೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.